# ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗ

1. ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗದ ಕ್ರಿಯಾತ್ಮಕ ಜವಾಬ್ದಾರಿಗಳು ಈ ಕೆಳಕಂಡಂತೆ ಇರುತ್ತವೆ. (ಎ)ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳ ತಯಾರಿಕೆ ಕಾರ್ಯ ಹಾಗೂ ಸಂಘಟಿಸುವ ಕಾರ್ಯ ನಿರ್ವಹಿಸುವುದು, (ಬಿ)ಬಾಹ್ಯ ನೆರವಿನ ಯೋಜನೆಗಳಿಗೆ ಇರುವ ಅವಶ್ಯಕತೆ ಆಂತರಿಕ ಮತ್ತು ಹೆಚ್ಚುವರಿ ಆಯವ್ಯಯ ಸಂಪನ್ಮೂಲ, ಇತರೆ ಹಂಚಿಕೆ ಕೇಂದ್ರ ಪುರಸ್ಕೃತ ಯೋಜನೆಗಳ ರಾಜ್ಯದ ಪಾಲನ್ನು ನಿಗದಿಪಡಿಸಿದ ನಂತರ ಸಂಪನ್ಮೂಲ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅಂತರ್–ವಲಯವಾರು ಯೋಜನಾ ಅನುದಾನ ಹಂಚಿಕೆಯನ್ನು ಮಾಡುವುದು, (ಸಿ)ವಲಯವಾರು ಯೋಜನಾ ಅನುದಾನ ಹಂಚಿಕೆ ಮಾಡಿದ ವಿವರಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸುವುದು, (ಡಿ)ಯೋಜನಾ ವಿವರಗಳನ್ನು ನೀತಿ ಆಯೋಗಕ್ಕೆ ಸಲ್ಲಿಸುವುದು. ಈ ವಿಭಾಗದ ಇನ್ನಿತರ ಕಾರ್ಯಕ್ರಮಗಳು (i) ನೀತಿ ಆಯೋಗದೊಂದಿಗೆ ಸಭೆಯನ್ನು ಆಯೋಜಿಸುವುದು. (ii) ನೀತಿ ಆಯೋಗದ ಸಭೆಗಳಿಗಾಗಿ ಮುಖ್ಯ ಮಂತ್ರಿಗಳ ಭಾಷಣವನ್ನು ತಯಾರಿಸುವುದು ಮುಂತಾದವುಗಳು. ಪ್ರತಿ ವರ್ಷ ಆರ್ಥಿಕ ಸಮೀಕ್ಷೆಗಾಗಿ ರಾಜ್ಯ ಹಣಕಾಸಿಗೆ ಸಂಬಂಧಿಸಿದ ಅಧ್ಯಾಯಗಳನ್ನು ತಯಾರಿಸುವುದು. ಅಂತಿಮ ಯೋಜನಾ ಗಾತ್ರವನ್ನು ನಿರ್ಧರಿಸಲು ಹಣಕಾಸು ಇಲಾಖೆಯೊಂದಿಗೆ ಹಲವು ಸಭೆಗಳನ್ನು ನಡೆಸಲಾಗುವುದು. ಈ ವಿಭಾಗವು ಎಲ್ಲಾ ಅನುಷ್ಠಾನ ಇಲಾಖೆಗಳವರು ಅವಶ್ಯಕತೆಯ ಮೇಲೆ ವಾರ್ಷಿಕ ಯೋಜನೆಯನ್ನು ತಯಾರು ಮಾಡಲು ಸಹಕರಿಸುತ್ತದೆ. ಆರ್ಥಿಕ ಇಲಾಖೆಯಿಂದ ನಿರ್ಧರಿಸಲ್ಪಟ್ಟ ಯೋಜನಾ ಗಾತ್ರ ಹಾಗೂ (IEBR, EAP,SDP,NABARD) ಕೇಂದ್ರ ಪುರಸ್ಕೃತ ವಲಯಗಳಿಗೆ ಕೇಂದ್ರ, ರಾಜ್ಯದ ಪಾಲು, ವೇತನ, GIA-ವೇತನ ಇತ್ಯಾದಿಗಳನ್ನೊಳಗೊಂಡಂತೆ ವಲಯವಾರು ಹಂಚಿಕೆಯನ್ನು ತಯಾರಿಸಿ ಮುಖ್ಯ ಕಾರ್ಯದರ್ಶಿಗಳಿಂದ ಅನುಮೋದನೆ ಪಡೆದು ಅನುಷ್ಠಾನ ಇಲಾಖೆಗಳಿಗೆ ಕಳುಹಿಸಲಾಗುತ್ತದೆ. ಇಲಾಖೆಗಳು ಕಾರ್ಯಕ್ರಮವಾರು ಹಂಚಿಕೆ ಮಾಡಿಕೊಂಡು ಅದನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿ ಅದರ ಪ್ರತಿಯನ್ನು ಯೋಜನಾ ಇಲಾಖೆಗೆ ಸಲ್ಲಿಸಲು ತಿಳಿಸಲಾಗುತ್ತದೆ. ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಪೂರ್ವಭಾವಿ ಸಭೆಗಳಲ್ಲಿ ಕಾರ್ಯಕ್ರಮವಾರು ಹಂಚಿಕೆ ಬಗ್ಗೆ ಚರ್ಚಿಸಲು ಸಹಾಯ ಮಾಡುವುದು. ಈ ವಿಭಾಗವು ಪ್ರತಿ ವರ್ಷ ವಾರ್ಷಿಕ ಯೋಜನೆಗೆ ಸಂಬಂಧಿಸಿದ ಮಾಹಿತಿಗಳನ್ನು ತಯಾರಿಸುತ್ತದೆ. ವಾರ್ಷಿಕ ಯೋಜನೆಯ ಮಾಹಿತಿಗಳು ಸಂಪುಟ–1 ಹಾಗೂ ಸಂಪುಟ–2ನ್ನು ಒಳಗೊಂಡಿರುತ್ತದೆ. ಸಂಪುಟ–1ರಲ್ಲಿ ಯೋಜನೆಗಳ ಎಲ್ಲಾ ವಿವರಗಳು ಅಂದರೆ ಯೋಜನೆಯ ಉದ್ದೇಶ, ಯೋಜನೆಗಳ ಫಲಾನುಭವಿಗಳು, ಇಲಾಖೆಯ ಪರಿಣಾಮ ಮತ್ತು ಯೋಜನೆಯ ಅನುಷ್ಠಾನದ ವಿವರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಸಂಪುಟ–2 ರಲ್ಲಿ ವಲಯವಾರು, ಕಾರ್ಯಕ್ರಮವಾರು ಪ್ರಸಕ್ತ ಸಾಲಿನ ಹಾಗೂ ಹಿಂದಿನ ಸಾಲಿನ, ಭೌತಿಕ ಗುರಿ ಹಾಗೂ ಸಾಧನೆ, ವಿದೇಶಿ ನೆರವಿನ ಯೋಜನೆಗಳ ವಿವರಗಳು(EAP), ಕೇಂದ್ರ ಪುರಸ್ಕೃತ ಯೋಜನೆಯ ವಿವರಗಳು, ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋಜನೆ ವಲಯವಾರು ಹಂಚಿಕೆ ಮುಂತಾದ ಅಂಕಿಅಂಶಗಳು ತಃಖ್ತೆ ಇರುತ್ತದೆ.

2. ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗವು ಈ ಕೆಳಕಂಡ ಇಲಾಖೆಗಳಿಗೆ ನೋಡಲ್ ವಿಭಾಗವಾಗಿ ಕಾರ್ಯ ನಿರ್ವಹಿಸುತ್ತಿದೆ. ಸದರಿ ಇಲಾಖೆಗಳು ಅನುಷ್ಠಾನಗೊಳಿಸುವ ಯೋಜನಾ ಕಾರ್ಯಕ್ರಮಗಳಿಗೆ ಯೋಜನಾ ಇಲಾಖೆಯ ಅಭಿಪ್ರಾಯವನ್ನು ನಿರೂಪಿಸುತ್ತಿದೆ.

ಅ) ವಾಣಿಜ್ಯ ಮತ್ತು ಕೈಗಾರಿಕೆ
ಆ) ಸಹಕಾರ
ಇ) ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು
ಈ) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಉ) ರೇಷ್ಮೆ ಇಲಾಖೆ
ಊ) ಆರ್ಥಿಕ ಇಲಾಖೆ

## ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗ

### ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗದ ಸಂಘಟನಾ ನಕ್ಷೆ.

